ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 18th May 1973/Vaishakha 28, 1895 S. E.

The House met in the Assembly Chamber,

Vidhana Soudha, at One O'clock

MR. DEPUTY SPEAKER (Sri B. P. KADAM) in the Chair

STARRED QUESTIONS

(to which oral Answers were given)

PEOPLE ENGAGED IN RELIFE WORKS IN GULBARGA DISTRICT

210. Sri BAPU GOWDA RAYAPPA (Shahapur).—Will the Chief Minister be pleased to state :—

The number of people who were engaged in relief works in Gulbarga District during the months of October, November, December 1972 and January 1973 (talukwise figures may be furnished) ?

Sri D. DEVARAJ URS (Chief Minister).—

Vide Statement appended.

STATEMENT

Showing the monthwise daily average labour engaged under "64 Famine Works and Departmental Works" in Gulbarga District

Sl. No.	Name of taluk		Monthwise labour engaged under 64 Famine Works during				Monthwise labour engaged under Departmental Works during			
			October 1972	November 1972	December 1972	January 1973	October 1972	November 1972	December 1972	January 1973
1.	Gulbarga	....	4110	9184	9585	7375	4385	6635	6565	12630
2.	Aland	....	8653	10860	10602	6625	6965	5756	6862	11640
3.	Afzalpur	...	12837	13415	10711	7717	2558	4908	4863	10336
4.	Chittapur	....	7005	8626	10880	6535	2282	2860	6660	9860
5.	Chincholi	...	3370	5790	6873	3160	1630	2401	3912	5230
6.	Yadgir	...	13265	4167	6610	3770	4536	2965	3595	1955
7.	Shahapur	...	4561	4017	4801	4372	4070	3977	5258	1767
8.	Shorapur	....	6471	4220	4445	4071	4592	5365	4955	3400
9.	Jewargi	....	10560	8679	9688	6400	5358	4882	4964	2490
10.	Sedam	...	7605	2967	4798	5808	3923	4585	5181	8608
	Total	....	78437	71925	78993	55833	40299	44334	52815	67916

ಶ್ರೀ ಬಾಪುಗೌಡ ರಾಯಪ್ಪ.— ತಾವು ಕೊಟ್ಟಿಂಥ ಮಂತಲಿವೈಜ ಸ್ಟೇಟ ಮೆಂಟ್ ಪ್ರಕಾರ ೬೪ ಫ್ಯಾಮಿನ್ ಕೆಳಗೆ ಅಕ್ಟೋಬರ ತಿಂಗಳಲ್ಲಿ ೧ ಲಕ್ಷ ೧೪ ಸಾವಿರ, ೭೫೬ ಜನ ಕೆಲಸ ಮಾಡುತ್ತಿದ್ದಾರೆ. ನವೆಂಬರ ತಿಂಗಳಲ್ಲಿ ಸುಮಾರು ೧ ಲಕ್ಷ ೧೬ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಡಿಸೆಂಬರ ತಿಂಗಳಲ್ಲಿ ೧ ಲಕ್ಷ ೪ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಈ ಫಿಗರ ಏನು ತೋರಿಸುತ್ತದೆ ಎಂದರೆ ಪ್ರತಿ ತಿಂಗಳು ಕೆಲಸ ಕೊಡತಕ್ಕ ಪರಿಸ್ಥಿತಿಯಲ್ಲಿ ಹೆಚ್ಚಳ ಆಗದೆ, ಕೆಲಸ ಕೊಡತಕ್ಕ ಪರಿಸ್ಥಿತಿಯಲ್ಲಿ ಕಡಿಮೆಯಾಗುತ್ತಾ ಬಂದಿದೆ. ಜನರಿಗೆ ಇದರಿಂದ ತೊಂದರೆಯಾಗುವ ಸಮಾಚಾರ ತಮಗೆ ಗೊತ್ತಿಲ್ಲವೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟು ಜನ ಬರುತ್ತಾರೆ ಅದರ ಮೇಲೆ ಹೋಗುತ್ತದೆ. ಕೆಲಸ ಇಲ್ಲದೆ ಅವರು ಬರುತ್ತಾ ಇಲ್ಲ ಎನ್ನುವ ಇನ್‌ಫರೆನ್ಸ ಏನು ಇದೆ ಅದು ಸರಿಯಲ್ಲ. ಕೆಲಸಕ್ಕೆ ಬರತಕ್ಕವರು ಅವರ ಇಚ್ಛೆ ಮೇಲೆ ಬರುತ್ತಾರೆ. ಅನೇಕ ಕಾರಣಗಳಿಂದ ಕೆಲವರು ಕೆಲಸಕ್ಕೆ ಒಂದು ತಿಂಗಳು ಹೆಚ್ಚಿಗೆ ಬರುತ್ತಾರೆ. ಒಂದು ತಿಂಗಳು ಕಡಿಮೆ ಬರುತ್ತಾರೆ. ಆದುದರಿಂದ ತಾವು ಏನು ಇನ್‌ಫರೆನ್ಸ ಡ್ರಾ ಮಾಡಿದ್ದೀರಿ, in my humble opinion, it may not be correct.

ಶ್ರೀ ಬಾಪುಗೌಡ ರಾಯಪ್ಪ.—ಮಾನ್ಯ ಮಂತ್ರಿಗಳು ಸ್ಪಷ್ಟವಾದಂಥ ಉತ್ತರ ಕೊಟ್ಟರೆ ಚೆನ್ನಾಗಿರುತ್ತದೆ. ನಾನು ಹೇಳುವುದು ಇಷ್ಟೆ ರಾಬಿ ಬೆಳೆ ಹೋದ ನಂತರ ಗುಲ್ಬರ್ಗದ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಕ್ಷಾಮ ಇದೆ ಎಂದು ತಾವು ಒಪ್ಪುತ್ತೀರಿ. ಆ ದೃಷ್ಟಿಯಿಂದ ಅಕ್ಟೋಬರ ತಿಂಗಳಲ್ಲಿ ಒಂದು ಲಕ್ಷ ೧೪ ಸಾವಿರ ಇದ್ದಂಥ ಕೂಲಿಗಾರರು ನವೆಂಬರ ತಿಂಗಳಲ್ಲಿಯ ಸಂಖ್ಯೆ ಹೆಚ್ಚಾಗುವ ಬದಲು ಒಂದು ಲಕ್ಷ ೧೬ ಸಾವಿರವಾಯಿತು ಮತ್ತು ಡಿಸೆಂಬರ ತಿಂಗಳಲ್ಲಿ ೧ ಲಕ್ಷ ೪ ಸಾವಿರ ಆಗಿದೆ. ಆ ರೀತಿ ಜನ ಕೆಲಸ ಇರಲಾರದೆ ಬೇರೆ ಬೇರೆ ಪ್ರಾಂತ್ಯಗಳಿಗೆ ಹೋಗಿದ್ದಾರೆ. ಬೆಂಗಳೂರಿಗೂ ಕೂಡ ಬಂದಂಥ ಸಮಾಚಾರ ಗೊತ್ತಿದೆ. ಸರ್ಕಾರದವರು ಸರಿಯಾದ ಕೆಲಸ ಒದಗಿಸಿಲ್ಲ ಎಂದು ಸ್ಪಷ್ಟವಾದ ಚಿತ್ರ ಅಂಕಿ ಅಂಶಗಳು ತೋರಿಸುತ್ತದೆ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರ ಹೇಳಿದ್ದೇನೆ. ಕಡಿಮೆಯಾಗುತ್ತಾ ಇದೆಯೋ ಹೆಚ್ಚಾಗುತ್ತಾ ಇದೆಯೋ ಎಂಬ ಅಂಕಿ ನಿಮಗೆ ಪ್ರಿಂಟ ಮಾಡಿ ಹಂಚಿದ್ದೇನೆ. ಅದರ ಬಗ್ಗೆ ವಿವಾದವಿಲ್ಲ. ತಾವು ಏನು ಇನ್‌ಫರೆನ್ಸ ಡ್ರಾ ಮಾಡುತ್ತಿದ್ದೀರಿ ಆ ಇನ್‌ಫರೆನ್ಸ ಸರಿಯಲ್ಲ. ಅದು ಒಂದು ಕಾರಣ ಇರಬಹುದು. ಆದರೆ ಜನಗಳು ಯಾತಕ್ಕೋಸ್ಕರ ಕೆಲಸಕ್ಕೆ ಹೆಚ್ಚಿರುವುದಿಲ್ಲ ಎಂದು ನಾನಾ ಕಾರಣಗಳಿರುತ್ತವೆ. ಉದಾಹರಣೆಗೆ ಹೇಳುವುದಾದರೆ, ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಕೆಲಸ ಒದಗಿಸಿದೆ. ಕೆಲಸ ಒದಗಿಸಿದಷ್ಟು ಪ್ರಮಾಣದಲ್ಲಿ ಜನ ಬರುತ್ತಾ ಇಲ್ಲ. ಅದಕ್ಕೆ ಅನೇಕ ಕಾರಣಗಳಿರುತ್ತವೆ. ತಾವು ಹೇಳಿದ ಕಾರಣ ಒಪ್ಪುವುದು ಕಷ್ಟ.

---

†Indicates that the remarks or speeches have not been revised by the member concerned.

ಶ್ರೀ ಬಾಪೂಗೌಡ ರಾಯಪ್ಪ.—ಜನವರಿ ತಿಂಗಳಲ್ಲಿ ತಮ್ಮ ಹೇಳಿಕೆಯ ಪ್ರಕಾರ ೧ ಲಕ್ಷ ೫೫ ಸಾವಿರ ಜನಕ್ಕೆ ಕೆಲಸ ಕೊಟ್ಟಿದ್ದೀರಿ. ಗುಲ್ಬರ್ಗಾ ಜಿಲ್ಲೆಯಲ್ಲಿ ಜನವರಿ ತಿಂಗಳಲ್ಲಿ ೬೪ ಫ್ಯಾಮಿನ್ ಕೆಳಗೆ ೫೫,೮೩೩ ಜನಕ್ಕೆ ಕೆಲಸ ಕೊಟ್ಟಿದ್ದೀರಿ ಮತ್ತು ಡಿಪಾರ್ಟ್‌ಮೆಂಟಲ್ ವರ್ಕ್ಸ್ ಕೆಳಗೆ ೬೭,೯೧೬ ಜನಕ್ಕೆ ಕೆಲಸ ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ ಎರಡೂ ಕೂಡಿಸಿದರೆ ೧ ಲಕ್ಷ ೨೨ ಸಾವಿರ ಆಗುತ್ತದೆ. ಅಕ್ಟೋಬರನಿಂದ ಜನವರಿ ತಿಂಗಳವರೆಗೆ ಹೆಚ್ಚಿನ ಜನಕ್ಕೆ ಕೆಲಸ ಕೊಡಬೇಕಾಗಿತ್ತು ಎಂಬುದು ಸರ್ಕಾರಕ್ಕೆ ಗೊತ್ತಿದೆ. ಆದರೂ ಕೂಡ ಜನ ಯಾತಕ್ಕೆ ಬಂದಿಲ್ಲ? ಕಾರಣ ಜನಕ್ಕೆ ಸರಿಯಾಗಿ ಕೂಲಿ ಬಿದ್ದಿಲ್ಲ. ತಾವು ಏನು ಕೆಲಸ ಒದಗಿಸುತ್ತಿದ್ದಿರಿ. ಗುಲ್ಬರ್ಗಾದಲ್ಲಿ ೧೭ ಲಕ್ಷ ಇದ್ದಂಥ ಜನಸಂಖ್ಯೆಯಲ್ಲಿ ಸುಮಾರು ೧ ಲಕ್ಷ ೨೨ ಸಾವಿರ ಯಾವ ಆಧಾರದ ಮೇಲೆ ಕೆಲಸ ಒದಗಿಸತಕ್ಕ ಪದ್ಧತಿಯನ್ನು ಹಾಕಿಕೊಂಡಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—I am not able to follow the Hon. Member. ಜನ ಕೆಲಸಕ್ಕೆ ಒಂದು ತಿಂಗಳು ಹೆಚ್ಚಾಗಿ ಬರುತ್ತಾರೆ. ಒಂದು ತಿಂಗಳು ಕಡಿಮೆಯಾಗಿ ಬರುತ್ತಾರೆ. ನಿರ್ದಿಷ್ಟವಾಗಿ ಇಂಥ ಕಾರಣದಿಂದ ಬರುತ್ತಾರೆಂದು ಹೇಳುವುದು ಕಷ್ಟ. ಅನೇಕ ವೇಳೆ ಪ್ರೈವೇಟ್ ಏಜನ್ಸೀಸ್ ಬೇಕಾದಷ್ಟು ಕೆಲಸ ಒದಗಿಸುತ್ತಿದ್ದಾರೆ. ಹೊರಗಡೆ ಅನೇಕ ಕೆಲಸ ಒದಗಿಸುತ್ತಾರೆ. ಸ್ವಂತ ಕೆಲಸಗಳು ಬೇರೆ ಇರುತ್ತವೆ. ಹೀಗೆ ನಾನಾ ಕಾರಣಗಳು ಇವೆ. ಸಾಕಷ್ಟು ಕೆಲಸ ಒದಗಿಸ ಬೇಕು ಎಂಬ ವಿವರಕ್ಕೆ ತಾವು ಏನು ಕಳಕಳಿಯಿಂದ ಹೇಳುತ್ತೀರಿ ಅದೇ ಕಳಕಳಿ ಸರ್ಕಾರಕ್ಕೆ ಇದೆ. ಅದರಲ್ಲಿ ನಿಮಗೂ ನಮಗೂ ಯಾವ ಭಿನ್ನಾಭಿಪ್ರಾಯವಿಲ್ಲ.

Sri RAJA PID NAIK.—It is not a fact that in Shorapur Taluk, the workers are not paid adequate wages and also the labourers are complaining about the non-availability of foodgrains? If so, may I know the measures taken by Government?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸಭೆಯ ಸದಸ್ಯರು ಆ ಕಡೆ ಸದಸ್ಯರು ಮತ್ತು ಈ ಕಡೆ ಸದಸ್ಯರು ನಾನು ಎಲ್ಲರೂ ಸೂಪ ಒಂದು ನಿಯೋಗ ಹೋಗಿ ವಿಷಯಗಳೆಲ್ಲವನ್ನೂ ನೋಡುವುದಕ್ಕೆ ಆಗದೇ ಇದ್ದರೂ, ಕೆಲಸಗಳು ಎಲ್ಲೆಲ್ಲಿ ನಡೆಯುತ್ತಿವೆ ಎನ್ನುವುದನ್ನು ನೋಡಿ, ಎಲ್ಲೆಲ್ಲಿ ಏನೇನು ಕಷ್ಟಗಳಿವೆ ಎನ್ನುವುದನ್ನು ವಿಚಾರ ಮಾಡಿ ಅವುಗಳಿಗೆ ಪರಿಹಾರಗಳನ್ನು ಕೊಟ್ಟು, ಈ ಸದನದಲ್ಲಿ ಒಂದು ಹೇಳಿಕೆ ಕೊಟ್ಟಿರತಕ್ಕದ್ದು ಮಾನ್ಯ ಸಭೆಯ ಸದಸ್ಯರ ಗಮನಕ್ಕೆ ಬಂದಿದೆ. ಎಲ್ಲಿಯಾದರೂ ಇನ್ನೂ ಲೋಪದೋಷ ಇದ್ದರೆ ಅದನ್ನು ತೀವ್ರಗತಿಯಿಂದ ಪರ್ಯಾಲೋಚನೆ ಮಾಡಿ ಬಗೆಹರಿಸುವುದಕ್ಕೆ ಯಾವ ಅಡ್ಡಿಯಿಲ್ಲ.

ಶ್ರೀ ಎ. ಶರಣಪ್ಪ.— ಕೂಲಿಗಾರರ ಸಂಖ್ಯೆ ಕಡಿಮೆಯಾಗುವುದರಲ್ಲಿ ಇನ್ನೊಂದು ಕಾರಣ ಇದೆ. ಅನೇಕ ಕೆಲಸಗಳು ದಿನೇ ದಿನೇ ಬಹಳ ಬಿಗಿಯಾಗಿ

ಬೆಳಿಗ್ಗೆ ೮ ಗಂಟೆಯಿಂದ ಸಾಯಂಕಾಲ ೬ ಗಂಟೆಯ ವರೆಗೆ ದುಡಿದರೂ ಒಂದು ರೂಪಾಯಿ ಕೂಡ ಸಿಗದಂಥ ಅನೇಕ ಸಂದರ್ಭಗಳಿವೆ. ಆ ಒಂದು ದೃಷ್ಟಿಯಿಂದ ಅನೇಕ ಜನರು ಸ್ಥಳಾಂತರ ಹೋಗಿ ಭಿಕ್ಷೆ ಬೇಡುತ್ತಾ ಇಲ್ಲಿಯ ವರೆಗೂ ಬಂದಿದ್ದಾರೆ. ಇವತ್ತಿನ ದಿವಸ ಇಬ್ಬರು ಹೆಣ್ಣುಮಕ್ಕಳನ್ನು ದಾರಿಯಲ್ಲಿ ನೋಡಿದೆ. ಆ ಕಾರಣ ದಿಂದ ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನಂದರೆ, ಈ ಒಂದು ವೇಜಸ್ ಸ್ವಲ್ಪ ಹೆಚ್ಚು ಮಾಡಿದರೆ ಒಳ್ಳೆಯದು. ಡಿಎಸ್ಆರ್ ರೇಟಿನ ಪ್ರಕಾರ ಕೊಡಬೇಕು ಎಂದು ನಿರ್ಧಾರ ಮಾಡಿದ್ದೀರಿ. ಅದಕ್ಕನುಗುಣವಾಗಿ ಈ ಒಂದು ಕೂಲಿಯನ್ನು ಬೋನಸ್ ರೂಪದಲ್ಲಿ ಕೊಟ್ಟಿದ್ದೇ ಆದರೆ ಜನರಿಗೆ ಅನುಕೂಲವಾಗಬಹುದು ಎಂದು ಮಾನ ಮಂತ್ರಿಗಳಿಗೆ ತಿಳಿಸಬಯಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈ ಸದನದಲ್ಲಿ ಸ್ಪಷ್ಟವಾಗಿ ತಮ್ಮಲ್ಲಿ ಅರಿಕೆ ಮಾಡಿದ್ದೇನೆ ಎಲ್ಲೆಲ್ಲಿ ಏನೇನು ತೊಂದರೆಗಳಿವೆ ಎನ್ನುವದನ್ನು ಇಂದು ಇಲ್ಲಿ ಕೂತುಕೊಂಡು ಹೇಳುವುದು ಕಷ್ಟವಾಗುತ್ತದೆ. ಯಾವ ಯಾವ ಪ್ರಾಂತದಲ್ಲಿ ಏನಾದರೂ ಸ್ಪೆಸಿಫಿಕ್ಕಾಗಿ ತೊಂದರೆ ಇದೆ ಎಂದು ಹೇಳಿದರೆ ಯಾವ ಕಾಲದಲ್ಲಿ ಬೇಕಾದರೂ ಕೂಡ ತಿಳಿಸಿದರೆ ಅದಷ್ಟು ಶೀಘ್ರವಾಗಿ, ನೀವು ನೀರೀಕ್ಷೆ ಮಾಡುವುದ ಕ್ಕಿಂತ ಹೆಚ್ಚು ಶೀಘ್ರವಾಗಿ ಪರಿಹಾರೋಪಾಯಗಳನ್ನು ನಿಮ್ಮ ಸಲಹೆ ತೆಗೆದುಕೊಂಡು ಮಾಡುವುದಕ್ಕೆ ಅಡಿಜ್ಞ ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ಗುಲ್ಬರ್ಗ ಜಿಲ್ಲೆಯಲ್ಲಿ ಕೊಟ್ಟಿರತಕ್ಕ ಅಂಕಿ ಅಂಶ ನೋಡಿದರೆ ಕಾಮಗಾರಿಗಳ ಮೇಲೆ ಬರತಕ್ಕ ಕೆಲಸಗಾರರು ಕನಿಷ್ಟ ೪–೫ ಲಕ್ಷ ಎಂದು ಅಂದಾಜು ಮಾಡಿದ್ದರೂ ಸಹ, ಕೇವಲ ೧ ಲಕ್ಷ ೨೨ ಸಾವಿರ ಬರಲಿಕ್ಕೆ ಕಾರಣವೇನು? ಇದು ಸರ್ಕಾರ ಗಮನಿಸಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅಂಕಿ ಅಂಶಗಳನ್ನು ಪ್ರಿಂಟ್ಮಾಡಿ ನಿಮ್ಮ ಕೈಗೆ ಹಂಚಿರುವಾಗ, ಪುನಃ ಗಮನಿಸತಕ್ಕ ಪ್ರಶ್ನೆಯೇ ಇಲ್ಲ. ಅಚ್ಚಾಗಿ ಕೊಟ್ಟಿರತಕ್ಕದ್ದು, ತಮ್ಮ ಹಸ್ತಗತವಾಗಿವೆ. ಇನ್ನು ಗಮನಿಸತಕ್ಕ ವಿಚಾರವೇನು?

Sri J. P. SARWESH.—Will the Hon. Minister give the latest figures *i.e.* for the months of March, April and May 1973?

Sri H. M. CHANNABASAPPA.—I require notice.

Mr. DEPUTY SPEAKER.—Sri S. A. Patil who is authorised o put Question No. 914 on behalf of Sri R. S. Patil.